ತಂದಿರೋ ಹುಡುಗ...'

'ಏನಿದ್ದರೇನು, ಸಲಿಲಾ? ಮನುಷ್ಯತ್ವ ಇರಬೇಕಲ್ಲವಾ?'

'ಎಕ್ಸ್ಯಾಕ್ಟ್ಲೀ—ಪರಿಧಿ ಸರ್... ಬಟ್ ದಿ ಸ್ಕೂಲ್ ವಾಂಟ್ಸ್ ಟು ಡೌನ್‌ಪ್ಲೇ ಇಟ್... ವಿಷಯ ಹೊರಹೋಗದ ಹಾಗೆ ಗೌಣವಾಗಿಡೋದೂಂತ ನಮಗೆಲ್ಲ ಫರಮಾನಾಗಿದೆ.'

'ಡಿಸ್ಗಸ್ಟಿಂಗ್...'

'ಎಲಿವೇಟರ್ ಡೋರ್ ಮೇಲಿದ್ದ ಸುಡುಗಾಡು ಗ್ರ್ಯಾಫಿಟೀನ ಕ್ಯೂಟ್ ಸ್ನೇಕ್ ಅಂತ ವ್ಯಾಖ್ಯಾನ ಮಾಡಿದ್ದು ಇನ್ನೇತಕ್ಕೆ—ಪರಿಧಿ ಸರ್? ಶುದ್ಧ ಹಿಪೋಕ್ರೆಸೀ, ಅಲ್ಲವಾ?'

ನನಗೇ ಗೊತ್ತಿರದೆ ನಾನು ಮೌನಕ್ಕಿಳಿದುಬಿಟ್ಟೆ. ಮನಸು ಜಡಿದಂತಾಗಿ ಒಳಮಾತುಗಳೂ ಮೂಕವಾದವು. ಕೆಲಹೊತ್ತು ಕುಳಿತಲ್ಲೇ ಹೂತುಹೋದೆ. ಹೇಳಿಕೆಗಳ ಮೇಲಿರಲಿ, ಯೋಚನೆಯ ಮೇಲೂ ಒತ್ತಾಯ ಹೇರುವ ಈ ವ್ಯವಸ್ಥೆಯ ಬಗೆಗೇ ಹೇಸಿಗೆಯೆನ್ನಿಸಿತು. ಸುಖೇನನೆದುರು, ಪ್ರೇಕ್ಷಾಳೆದುರು ಸಿಡಿದಾಡಬೇಕೆನ್ನಿಸಿತು. ಕಷ್ಟಪಟ್ಟು ನನ್ನನ್ನು ನಾನು ತಡೆದೆ. ಶಾಲೆಗೆ ಹೊರಗಿನವನಾದ ನನಗೇ ಹೀಗನಿಸುವಾಗ, ಒಳಗಿರಲೇಬೇಕಾದ ಅನಿವಾರ್ಯವಿರುವ ಈ ಸಲಿಲೆಯ ಮನಸ್ಸಿನಲ್ಲಿ ಏನೆಲ್ಲ ಜರುಗಿದೆಯೆಂದು ನನಗೆ ಅಷ್ಟಿಷ್ಟು ಅನ್ನಿಸತೋರಿತು. ಸುಖೇನ—ಪ್ರೇಕ್ಷಾರ ಪಾಖಂಡೀ ಚಹರೆಗಳು ಮನಸೊಳಗೆ ನೆರೆದು ಗಹಗಹಿಸಿ ನಕ್ಕಂತನ್ನಿಸಿತು. ಇಷ್ಟರ ನಡುವೆ, ಮೇಜು ತಲುಪಿದ್ದ ಎರಡೂ ಕಾಫಿಗಳು ಇದ್ದಲ್ಲೇ ತಣಿದು ಪಾನಕವಾಗಿದ್ದವು.

'ಯಾರು ಆ ಹುಡುಗ, ಸಲಿಲಾ? ಬೆಟರ್ ಟು ನೋ ದಟ್...' ಅಂತಂದೆ.

'ಹೇಳುತೀನಿ, ಪರಿಧಿ ಸರ್... ಆದರೆ ಒಂದು ಕಂಡೀಶನ್...' ಎಂದು ಹೇಳಿದ ಸಲಿಲೆ, ತಕ್ಷಣ ಮಾತುತಿದ್ದಿ, 'ಒಂದಲ್ಲ, ಎರಡು.' ಅಂತಂದಳು.

'ಸರಿ.'

'ಮೊದಲನೇದಾಗಿ ಈ ವಿಷಯ ನಿಮ್ಮಿಂದಾಚೆಗೆ ಹೋಗಕೂಡದು, ಪರಿಧಿ ಸರ್...'

'ಸರಿ.'

'ಇನ್ನೊಂದು, ನಾಳೆ ಪಾಶ್ ಕೌನ್ಸಿಲ್ ಮೀಟಿಂಗಿದೆ. ನನ್ನ ಮಾರಲ್ ಸಪೋರ್ಟಿಗಾಗಿ ನೀವದರಲ್ಲಿ ಭಾಗಿಯಾಗಲೇ ಬೇಕು... ವಿ ಶಲ್ ಕನ್‌ಫ್ರಂಟ್ ದಿ ಬಾಯ್ ಇನ್ ದಿ ಮೀಟಿಂಗ್... ವಿಚಾರಣೇಲಿ ಏನಾಗುತ್ತೇಂತ ನನಗೆ ಗೊತ್ತು. ಆದರೆ, ಅವನಿಗೆ ಎಚ್ಚರಿಕೆ ಹೇಳದೆ ಮಾತ್ರ ಬಿಡಬಾರದು. ನನಗೆ ಗೊತ್ತಿರೋ ಹಾಗೆ ನೀವು ಹೇಳಿದ ಗೆರೆ ಅವನು ದಾಟಲಿಕ್ಕಿಲ್ಲ.'

ಶಾಲೆಯ ಆಡಳಿತದೊಳಗಿನ ಗೋಜೆಷ್ಟೇ ಒಲ್ಲೆನಿಸಿದರೂ ಸಲಿಲೆಯ ಒತ್ತಾಯಕ್ಕೆ ಮಣಿದು ಕೌನ್ಸಿಲಿನಲ್ಲಿ

